ದಿನಾಂಕ : 30.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿಯ ಪರವಾಗಿ ಶ್ರೀ ಕೆ.ಪಿ. ವಕೀಲರಿಂದ :**

*ಎಂ.ಆರ್.ನಂ.**166** ಮೈನಸ್ **14/1993.94** ರಲ್ಲಿ ನನ್ನಂತೆಯೇ ವೆಂಕಟರೆಡ್ಡಿ, ನಾರಾಯಣಸ್ವಾಮಿ, ಪಲ್ಲಾರೆಡ್ಡಿ, ವೆಂಕಟಮ್ಮ ಹಾಗೂ ಇತರರಿಗೆ ಮುಟೇಶನ್ ಆಗಿದೆ ಎಂದರೆ ಸರಿ . ಸಾಕ್ಷಿಯು ಸದರಿ ದಾಖಲಾತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ **4** ಎಂದು ಗುರುತಿಸಲಾಯಿತು . ಎಂ.ಆರ್.ನಂ.**163/95.96** ರಲ್ಲಿ ಸಹ ನನ್ನಂತೆಯೇ ಇತರರಿಗೂ ಸಹ ಮುಟೇಶನ್ ಆಗಿದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ನಮ್ಮ ಅಣ್ಣ ಬರೆಸಿರುತ್ತಾರೆ ಎಂದು ಹೇಳುತ್ತಾರೆ . ಸದರಿ ದಾಖಲಾತಿಯನ್ನು ನಿಡಿ **5** ಎಂದು ಗುರುತಿಸಲಾಯಿತು. ನಿಡಿ **5** ರ ಪ್ರಕಾರ ಸರ್ವೆ ನಂ.**227** ರಲ್ಲಿ ನನಗೆ **4** ಎಕರೆ ಆಸ್ತಿ ಬಂದಿತ್ತು ಎಂದರೆ ಸರಿ . ಸದರಿ ಆಸ್ತಿಯನ್ನು ದಿ **.19.08.2004** ರಂದು ನಾನು ಶ್ರೀರಾಮರೆಡ್ಡಿ ಎಂಬುವವರಿಗೆ ಮಾರಾಟ ಮಾಡಿರುತ್ತೇನೆಂದರೆ ಸರಿ. ಸದರಿ ಪತ್ರದಲ್ಲಿ ಸದರಿ ಆಸ್ತಿಯು ಎಂ .ಆರ್.ನಂ.**163/95.96** ರಂತೆ ನನಗೆ ಆಸ್ತಿ ಬಂದಿದೆ ಎಂದು ಬರೆಯಲಾಗಿತ್ತು ಎಂದರೆ ಸರಿ. ನಿಡಿ **5** ನ್ನು ನಾನು ಎಲ್ಲಿಯೂ ಸಹ ಪ್ರಶ್ನೆ ಮಾಡಿರುವುದಿಲ್ಲ.*

*ವೆಂಕಟಮ್ಮ ಎಂಬುವವರು ನನ್ನ ವಿರುದ್ಧ ಒಂದು ದಾವೆ ಹಾಕಿದ್ದಾರೆ ಮತ್ತು ನಾನು ಅದರಲ್ಲಿ ವಕೀಲರ ಮೂಲಕ ಹಾಜರಾಗಿದ್ದೇನೆಂದರೆ ಸರಿಯಲ್ಲ . ಸದರಿ ದಾವೆ ನಾನು ತಕರಾರು ಸಲ್ಲಿಸಿದ್ದೇನೆಂದರೆ ಸರಿಯಲ್ಲ . ದಾವಾಆಸ್ತಿಯು ವೆಂಕಟರೆಡ್ಡಿಯವರಿಗೆ ನಿಡಿ **5** ರ ಮೂಲಕವೇ ಬಂದಿದೆ ಎಂದರೆ ಸರಿಯಲ್ಲ . ಇಲ್ಲಿಯವರೆಗೆ ವೆಂಕಟರೆಡ್ಡಿಯವರಿಗೆ ಯಾವ ಯಾವ ಆಸ್ತಿ ಹೋಗಿವೆ ಎಂದು ನನಗೆ ಗೊತ್ತಿಲ್ಲ .ನನಗೆ ನನ್ನ ಆಸ್ತಿಯನ್ನು ಬಿಟ್ಟು ಬೇರೆ ಯಾರಿಗೆ ಯಾವ ಆಸ್ತಿ ಹೋಗಿದೆ ಎಂದು ನನಗೆ*

*ಗೊತ್ತಿಲ್ಲ. ನಿಡಿ **4** ಮತ್ತು **5** ರಲ್ಲಿ ವಿಭಾಗಪತ್ರದ ಬಗ್ಗೆ ಉಲ್ಲೇಖವಿಲ್ಲ ಎಂದರೆ ಸರಿ . ನಾನು ಹಾಜರುಪಡಿಸಿರುವ ವಿಭಾಗಪತ್ರದ ಮೂಲಕ ಖಾತೆ ಆಗಿರುವುದಿಲ್ಲ. ಪ್ರತಿವಾದಿಗಳಿಗೆ ದಾವಾಆಸ್ತಿ ಸೇರಿದ್ದು ಅದನ್ನು ಅವರು ಅಭಿವೃದ್ಧಿ ಮಾಡಿದ್ದಾರೆ ಆದ್ದರಿಂದ ಅದನ್ನು ಕಬಳಿಸುವ ಸಲುವಾಗಿ ವಿಭಾಗಪತ್ರವನ್ನು ನಾನೇ ಸೃಷ್ಟಿ ಮಾಡಿದ್ದೇನೆಂದರೆ ಸರಿಯಲ್ಲ. ಆಸ್ತಿಗಳು ಬೇರೆ ಬೇರೆ ಊರಿನಲ್ಲಿ ಇರುವ ಕಾರಣ ನಿಡಿ **4** ಮತ್ತು **5** ಪ್ರತ್ಯೇಕವಾಗಿ ಆಗಿವೆ ಎಂದರೆ ಸರಿ. ನಿಡಿ **4** ರ ಪ್ರಕಾರ ಪ್ರತಿವಾದಿಗಳ ಹಿರಿಯರ ಭಾಗಕ್ಕೆ ಸರ್ವೆ ನಂ.**135/3** ರಲ್ಲಿ ಎರಡು ಎಕರೆ **24** ಗುಂಟೆ ಪೈಕಿ ಒಂದು ಎಕರೆ **12** ಗುಂಟೆ ಹಾಗೂ ಸರ್ವೆ ನಂ **52** ರಲ್ಲಿ **2.6 ½** ಗುಂಟೆ ಆಸ್ತಿ ಹೋಗಿದೆ ಎಂದರೆ ಸರಿ . ಅದೇ ರೀತಿ ಸರ್ವೆ ನಂ.**224** ರಲ್ಲಿ ನಿಡಿ **5** ರ ಪ್ರಕಾರ ಪ್ರತಿವಾದಿಗಳಿಗೆ ಸರ್ವೆ ನಂ.**224** ರಲ್ಲಿ **7** ಎಕರೆ **17** ಗುಂಟೆ ಹಾಗೂ ಸರ್ವೆ ನಂ.**229** ರಲ್ಲಿ **4** ಎಕರೆ **39** ಗುಂಟೆ ಆಸ್ತಿ ಹೋಗಿದೆ ಎಂದರೆ ಸರಿಯಲ್ಲ . ವೆಂಕಟರೆಡ್ಡಿಯವರ ಜೀವಿತ ಕಾಲದಲ್ಲಿ ನಿಡಿ **4** ಮತ್ತು **5** ನ್ನು ನಾನು ಎಲ್ಲಿಯೂ ಸಹ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ . ದಾವಾಆಸ್ತಿಯು **2**ನೇ ಪ್ರತಿವಾದಿಯ ಹೆಸರಿಗೆ **1**ನೇ ಪ್ರತಿವಾದಿಯ ಅನುಮತಿಯ ಮೇರೆಗೆ **2013.14** ರಲ್ಲಿ ಖಾತೆಯಾಗಿದೆ ಎಂದರೆ ಸರಿಯಲ್ಲ. ಆ ರೀತಿ ಖಾತೆಯಾದ ನಂತರ ಹಲವಾರು ಬಾರಿ ಅವರು ಬ್ಯಾಂಕಿಗೆ ಅಡವಿಟ್ಟು ಸಾಲ ಪಡೆದು ನಂತರ ಬಿಡಿಸಿಕೊಂಡಿದ್ದಾರೆಂದರೆ ಸರಿಯಲ್ಲ . ನಾನು ದಾವಾಆಸ್ತಿಯನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿಯನ್ನು ಪ್ರಶ್ನೆ ಮಾಡಿಲ್ಲ ಏಕೆಂದರೆ ಇದು ಮಾತ್ರ ತೊಂದರೆಯಾಗಿದೆ . ಎಲ್ಲಾ ಇತರೆ ಆಸ್ತಿಗಳೊಂದಿಗೆ ದಾವಾಆಸ್ತಿಯು ಸಹ ಮುಟೇಶನ್ ಆಗಿತ್ತು ಎಂದರೆ ಸಾಕ್ಷಿಯು ಹೌದು ಆದರೆ ಮೋಸ ಮಾಡಿ ಮಾಡಿದ್ದಾರೆಂದು ಹೇಳುತ್ತಾರೆ. ದಾವಾಆಸ್ತಿಯಲ್ಲಿ ನಾನು ಸ್ವಾ ಧೀನ ಇರಲಿಲ್ಲ ಮತ್ತು ಪ್ರತಿವಾದಿಗ ನನಗೆ ತೊಂದರೆ ನೀಡಿಲ್ಲ ಎಂದರೆ*

*ಸರಿಯಲ್ಲ. ನನ್ನ ಸ್ವಾ ಧೀನವನ್ನು ರುಜುವಾತುಪಡಿಸಲು ದಾಖಲಾತಿ ನೀಡಿಲ್ಲ ಎಂದರೆ ಸರಿ . ಪ್ರತಿವಾದಿಗಳಿಗೆ ತೊಂದರೆ ನೀಡಲು ಹಾಗೂ ಅವರು ಅಭಿವೃದ್ದಿ ಮಾಡಿರುವ ಆಸ್ತಿಯನ್ನು ಕಬಳಿಸಲು ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.*

**ಮರು ವಿಚಾರಣೆ: ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ *ಗ*ಣಕೀಕರಿಸಲಾಯಿತು).**

ಓದಿ ಹೇಳಿ ಕೇಳಿ ಸರಿಯಾಗಿದೆ.

(ಮನು *ಬಿ.ಕೆ.*)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶ್ರೀನಿವಾಸಪುರ